# ಸಿಹಿ-ಕಹಿ ವಸ್ತು!



ಒಂದೂರಿನಲ್ಲಿ ಒಬ್ಬ ಶ್ರೀಮಂತ ವರ್ತಕನಿಗೆ ಅತ್ಯಂತ ಸುಂದರಳಾದ ಮಗಳಿದ್ದಳು. ಊರಿನಲ್ಲಿ ಎಲ್ಲರೂ ಅವಳ ಕೈ ಹಿಡಿಯಲು ಹಾತೊರೆಯುತ್ತಿದ್ದರು. ಕೊನೆಗೆ ಆ ವರ್ತಕನು ಊರಿನಲ್ಲೆಲ್ಲಾ 'ನಾನು ಎರಡು ಪ್ರಶ್ನೆಗಳನ್ನು ಕೇಳುವೆ. ಯಾರು ಅದಕ್ಕೆ ಸಮರ್ಪಕವಾದ ಉತ್ತರ ಕೊಡುತ್ತಾರೊ ಅವರಿಗೆ ನನ್ನ ಮಗಳನ್ನು ಮದುವೆ ಮಾಡಿ ಕೊಡುತ್ತೇನೆ' ಎಂದು ಡಂಗುರ ಸಾರಿದ.

ಮೊದಲನೆಯ ಪ್ರಶ್ನೆ ಪ್ರಪಂಚದಲ್ಲಿ ಅತಿ ಸಿಹಿಯಾದ ವಸ್ತು ಯಾವುದು?

ಮಾರನೇ ದಿವಸ ಊರಿನ ಹಲವಾರು ಶ್ರೀಮಂತ ತರುಣರು ಸಿಹಿ ಜೇನು, ಕಬ್ಬು, ಸಿಹಿ ಹಣ್ಣುಗಳು, ಸಿಹಿ ತಿನಿಸು ಇತ್ಯಾದಿಗಳನ್ನು ತಂದಿದ್ದರು. ಆದರೆ ಬಡವನಂತಿದ್ದರೂ ಚುರುಕಾಗಿದ್ದ ಒಬ್ಬ ಯುವಕ ಮೂಲೆಯಲ್ಲಿ ಒಂದು ಪುಟ್ಟ ಪೆಟ್ಟಿಗೆ ಇಟ್ಟುಕೊಂಡು ನಿಂತಿದ್ದನು.

ಆ ವರ್ತಕನು 'ನೀನು ಏನಪ್ಪಾ ತಂದಿದ್ದೀಯಾ?' ಎಂದು ಕೇಳಿದಾಗ, ಅವನು ಆ ಪೆಟ್ಟಿಗೆ ತೆಗೆದು ಅದರಲ್ಲಿದ್ದ ಒಂದು ಆಡಿನ ನಾಲಗೆಯನ್ನು ತೋರಿಸಿದನು.

ಆಗ ವರ್ತಕನು 'ಏನಯ್ಯಾ, ಹಾಸ್ಯ ಮಾಡ್ತಿದ್ದೀಯಾ'? ಎಂದು ಕೇಳಿದ.

ಅವನು 'ಇಲ್ಲ, ನಾನು ಹಾಸ್ಯ ಮಾಡುತ್ತಿಲ್ಲ. ನಾನು ಮನುಷ್ಯನ ನಾಲಗೆ ತರಬೇಕಿತ್ತು, ಆದರೆ ಅದರ ಬದಲಿಗೆ ನಿಮಗೆ ಅರ್ಥ ಮಾಡಿಸುವುದಕ್ಕೆ ಇದನ್ನೇ ತಂದೆ. ನಾಲಗೆಯಿಂದ ಹೊರಡುವ ಮಾತುಗಳಿಗಿಂತ ಸಿಹಿಯಾದದ್ದು ಮತ್ತೊಂದಿಲ್ಲ. ಸೋತಿದ್ದ ಎಷ್ಟೋ ಜನರು ಸಿಹಿಯಾದ ಒಳ್ಳೆಯ ಮಾತಿನಿಂದ ಜೀವನದಲ್ಲಿ ಗೆದ್ದಿದ್ದಾರೆ. ಹಾಗೆಯೇ ಎಷ್ಟೋ ರೋಗಿಗಳು ಸವಿ ಮಾತಿನಿಂದ ಗುಣ ಹೊಂದಿದ ಎಷ್ಟೋ ನಿದರ್ಶನಗಳಿವೆ' ಎಂದ.

ವರ್ತಕನು 'ಭಲೇ, ಮೆಚ್ಚಿದೆ. ಸರಿ ನನ್ನ ಎರಡನೇ ಪ್ರಶ್ನೆಯನ್ನು ಎಲ್ಲರೂ ಕೇಳಿಸಿಕೊಳ್ಳಿ' ಎಂದನು.

'ಪ್ರಪಂಚದಲ್ಲೇ ಅತ್ಯಂತ ಕಹಿ ವಸ್ತು ಯಾವುದು? ನಾಳೆ ತೊಗೊಂಡು ಬನ್ನಿ' ಎಂದು ತಿಳಿಸಿದನು.

ಮಾರನೆಯ ದಿನ ಅವರು ಹಾಗಲಕಾಯಿ, ಬೇವಿನಕಾಯಿ ಮುಂತಾದವನ್ನು ತಂದಿದ್ದರು. ಆ ಬಡ ತರುಣನು ಯಥಾಪ್ರಕಾರ ಆ ಸಣ್ಣ ಪೆಟ್ಟಿಗೆ ತಂದಿದ್ದನು.

ಆಗ ಶ್ರೀಮಂತನು ಕುತೂಹಲದಿಂದ 'ಏನಪ್ಪಾ, ಈ ಸರ್ತಿ ಏನು ತಂದಿದ್ದೀಯಾ?' ಎಂದು ಕೇಳಿದಾಗ, ಅವನು ಆ ಪೆಟ್ಟಿಗೆಯಿಂದ ಮತ್ತೆ ಆ ಆಡಿನ ನಾಲಗೆಯನ್ನು ತೋರಿಸಿದನು.

ಆಗ ವರ್ತಕನು ಕೋಪದಿಂದ 'ಏನಯ್ಯಾ ಈ ಬಾರಿಯೂ ಅದನ್ನೇ ತಂದಿದ್ದೀಯಾ?' ಎಂದ.

ಅವನು ಶಾಂತಚಿತ್ತದಿಂದ 'ಈ ನಾಲಗೆಗಿಂತ ಕಹಿಯಾದ ವಸ್ತು ಬೇರೊಂದಿಲ್ಲ, ಇದರಿಂದ ಎಷ್ಟೋ ಒಳ್ಳೆಯ ಸಂಬಂಧಗಳು ಹಾಳಾಗಿ ಕಹಿಯಾಗಿವೆ. ಹಾಗೆ ಎಷ್ಟೋ ಒಳ್ಳೆಯ ಕಾರ್ಯಗಳು ಕೆಟ್ಟ ಮಾತಿನಿಂದ ಹಾಳಾಗಿ ಎಲ್ಲರ ಜೀವನವನ್ನು ಕಹಿ ಮಾಡಿದೆ' ಎಂದ.

ಆ ವರ್ತಕನು ತರುಣನ ಆಲೋಚನೆ, ವಿಚಾರಗಳಿಗೆ ದಂಗಾಗಿ ಮನಸೋತು ಇವನಿಗಿಂತ ಉತ್ತಮ ಪುರುಷನು ತನ್ನ ಮಗಳಿಗೆ ಬೇರೆ ಯಾರು ಸಿಗುತ್ತಾರೆ ಎಂದು ಸಂತೋಷದಿಂದ ಅವನಿಗೆ ಮಗಳನ್ನು ಮದುವೆ ಮಾಡಿಕೊಟ್ಟ.

ನೀತಿ: ನಾಲಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು

**-ಸಿ.ಆರ್.ಪುಷ್ಪ**

## ನಿಮಗೆಷ್ಟು ಗೊತ್ತು

## ಇರುವೆ ಭಕ್ಷಕ !



ಇರುವೆಗಳನ್ನೂ ಹುಡುಕಿಕೊಂಡು ತಿಂದು ಹೊಟ್ಟೆ ತುಂಬಿಸಿಕೊಳ್ಳುವ ಜೀವಿಯೊಂದು ಈ ಜಗತ್ತಿನಲ್ಲಿದೆ ಎಂದರೆ ಆಶ್ಚರ್ಯವಾಗುತ್ತದೆಯಲ್ಲವೇ? ಹೌದು, ಈ ಜೀವಿಯ ಪ್ರಮುಖ ಆಹಾರವೇ ಇರುವೆಗಳು. ಇದಕ್ಕೆ ಆ್ಯಂಟ್‌ಈಟರ್ ಅಥವಾ ಇರುವೆಭಕ್ಷಕ ಎಂದೂ ಕರೆಯುವರು. ತಾನು ನಡೆದಾಡುವ ಜಾಗದಲ್ಲಿ ಇರುವೆಗಳ ಗೂಡು ಕಂಡರೆ ಸಾಕು ಉದ್ದನೆಯ ಮೂತಿಯನ್ನು ಇರುವೆ ಗೂಡಿನೊಳಗೆ ತೂರಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತದೆ.

ಇರುವೆಭಕ್ಷಕವು ಬಾಯಿಯಲ್ಲಿ ಹಲ್ಲುಗಳಿಲ್ಲದ ಒಂದು ಸಸ್ತನಿಯಾಗಿದ್ದು, ಘನರೂಪದ ಆಹಾರ ಪದಾರ್ಥವನ್ನು ಜೀರ್ಣಿಸಿಕೊಳ್ಳುವ ಸಾಮರ್ಥ್ಯ ಅದಕ್ಕಿಲ್ಲ. ಆದರೆ ಆಹಾರವನ್ನು ತನ್ನ ಉದ್ದವಾದ ನಾಲಗೆಯ ಮೂಲಕ ಹೊಟ್ಟೆಗೆ ಇಳಿಸಿಕೊಳ್ಳುತ್ತದೆ. ಇದರ ನಾಲಗೆ ನಿಮಿಷಕ್ಕೆ 150– 160 ಬಾರಿ ಚಪ್ಪರಿಸುತ್ತದೆ. ದಿನವೊಂದಕ್ಕೆ ಈ ಜೀವಿಯು ಸುಮಾರು 35 ಸಾವಿರದಷ್ಟು ಇರುವೆ ಹಾಗೂ ಗೆದ್ದಲು ಹುಳುಗಳನ್ನು ಭಕ್ಷಿಸುತ್ತದೆ.

ಇರುವೆಗಳ ಕಡಿತದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಒಂದೆರಡೇ ನಿಮಿಷದಲ್ಲಿ ತನ್ನ ಭೋಜನ ಮುಗಿಸಿ ಆ ಜಾಗದಿಂದ ಕಾಲ್ಕೀಳುತ್ತದೆ. ಮತ್ತೆ ಬಂದಾಗ ಆಹಾರ ಸಿಗಲಿ ಎನ್ನುವ ಕಾರಣಕ್ಕೆ ಇದು ಇರುವೆ ಗೂಡನ್ನು ಸಂಪೂರ್ಣವಾಗಿ ನಾಶಮಾಡುವುದಿಲ್ಲ! ಇದರ ಮೂಗು ಮನುಷ್ಯರಿಗಿಂತಲೂ 50 ಪಟ್ಟು ಅಧಿಕ ವಾಸನಾಗ್ರಹಿಕೆ ಸಾಮರ್ಥ್ಯ ಹೊಂದಿರುತ್ತದೆ.

**-ಪಿಎನ್‌ಎಚ್‌ಎಚ್ಕೆ**